

# ಚಿನ್ನದ ಹಕ್ಕಿ

**ಬೆ**ಟ್ಟಗುಡ್ಡಗಳಿಂದ ಸುತ್ತುವರೆದ ಒಂದು ಕಾಡು. ಅದರ ಅಂಚಿನಲ್ಲಿ ಒಂದು ಚಿಕ್ಕ ಗುಡಿಸಲು. ಅದರಲ್ಲಿ ವಯಸ್ಸಾದ ಗಂಡ ಹೆಂಡತಿ ವಾಸವಾಗಿದ್ದರು. ಕಾಡುಪ್ರಾಣಿಗಳನ್ನು, ಪಕ್ಷಿಗಳನ್ನು ಬೇಟೆಯಾಡುತ್ತ ಜೀವನಯಾಪನೆ ಮಾಡುತ್ತಿದ್ದರು. ಅವರದು ಕಡುಬಡತನದ ಬದುಕು. ಹಾಗೆಂದು ಅವರೇನೂ ದುಃಖಿಸುತ್ತಿರಲಿಲ್ಲ! ಬೇಟೆಯಾಡಿ ಮುದುಕ ಸಂಪಾದಿಸುವ ಅಲ್ಪಸ್ವಲ್ಪದರಲ್ಲಿಯೇ ಮುದುಕಿ ಸದಾ ಹಸನ್ಮುಖಿಯಾಗಿದ್ದಳು! ಒಂದು ದಿನ ಎಂದಿನಂತೆ ಮುದುಕ ಬೆಳಗ್ಗೆ ಎದ್ದವನೇ ಬೇಟೆಗಾಗಿ ಕಾಡಿಗೆ ಹೊರಟನು. ಅವತ್ತು ಸುತ್ತಮುತ್ತಲೂ ಬಿಸಿಲು ಹರಡಿತ್ತು. ವಾತಾವರಣ ಬಹಳ ಪ್ರಸನ್ನವಾಗಿತ್ತು. ಮುದುಕ ಕಾಡಿನೊಳಗೆ ಪ್ರವೇಶಿಸಿದನು. ಅಲ್ಲಿ ಇದ್ದ ಅನೇಕ ಸುಂದರ ಪಕ್ಷಿಗಳು, ಮೊಲಗಳು, ಪಾರಿವಾಳಗಳು, ಅಳಿಲುಗಳು ಮುಂತಾದ ಪ್ರಾಣಿಗಳನ್ನು ನೋಡಿದ. ಅವುಗಳು ಸಹ ಅಂದು ಅತ್ಯಂತ ಆನಂದದಿಂದ ಇರುವಂತೆ ಕಂಡುಬಂದವು. ಕಾಡಿನ ನಾಲ್ಕು ದಿಕ್ಕುಗಳಲ್ಲಿಯೂ ಎಂದೂ ಕಾಣದ ಚಿನ್ನದ ಪ್ರಕಾಶ ಅಂದು ಹರಡಿದ್ದನ್ನು ಮುದುಕ ಹಠಾತ್ತನೆ ಗಮನಿಸಿ ಬೆರಗಾಗಿಬಿಟ್ಟ. ಬೆಳಕು ಎಲ್ಲಿಂದ ಬರುತ್ತಿದೆ ಎಂದು ಕಾಣಲು ಅತ್ತಿತ್ತ ಕಣ್ಣಾಡಿಸಿದ. ಮರದಲ್ಲಿನ ಒಂದು ಕೊಂಬೆಯ ಮೇಲೆ ಚಿನ್ನದಂತೆ ಹೊಳೆಹೊಳೆಯುತ್ತಿದ್ದ ಅತ್ಯಂತ ಸುಂದರವಾದ ಪಕ್ಷಿಯೊಂದು ಕುಳಿತಿರುವುದನ್ನು ಕಂಡ. ಇಂಥ ಸುಂದರವಾದ ಚಿನ್ನದ ಪಕ್ಷಿಯನ್ನು ಮುದುಕನು ಕಾಡಿನಲ್ಲಿ ಹಿಂದೆಂದೂ ನೋಡಿರಲಿಲ್ಲ. ಆಶ್ಚರ್ಯದಿಂದ ಕಣ್ಣನ್ನು ಅಗಲಿಸಿ, ನೆಟ್ಟನೋಟದಿಂದ ಆ ಹಕ್ಕಿಯನ್ನೇ ದೃಷ್ಟಿಸುತ್ತ ನಿಂತುಬಿಟ್ಟ. ಅವನ ದೃಷ್ಟಿ ಅಲ್ಲಿಯೇ ನೆಲೆನಿಂತಿತು. ಅವನು ಬೇರೆ ಏನನ್ನೂ ನೋಡಲಾರದವನಾದ.

ಮುದುಕನಿಗೆ ಮತ್ತಷ್ಟು ಆಶ್ಚರ್ಯ ಕಾದಿತ್ತು! ಆ ಚಿನ್ನದ ಹಕ್ಕಿ ಮಾತನಾಡಲು ಮೊದಲಿಟ್ಟಿತು! ಅದು ಆ ಮುದುಕನಿಗೆ ಹೇಳಿತು: "ನೀನು ಇನ್ನು ಮೇಲೆ ಕಾಡಿನ ಪಶುಪಕ್ಷಿಗಳನ್ನು ಬೇಟೆಯಾಡಿ ಕೊಲ್ಲಬೇಡ." ಪಕ್ಷಿಯ ಮಾತು ಕೇಳಿ ಚಕಿತನಾದ ಮುದುಕ ಪ್ರಶ್ನಿಸಿದ: "ಹಾಗಾದರೆ ನಾನು ಮತ್ತು ನನ್ನ ಹೆಂಡತಿ ಬದುಕುಳಿಯುವುದಾದರೂ ಹೇಗೆ?" ಚಿನ್ನದ ಹಕ್ಕಿ ಅವನಿಗೆ ಹೀಗೆ ಉತ್ತರ ಕೊಟ್ಟಿತು: "ಆ ವಿಷಯದಲ್ಲಿ ಯಾವುದೇ ಚಿಂತೆ ಬೇಡ. ಎಲ್ಲ ವ್ಯವಸ್ಥೆಯೂ ಆಗುತ್ತದೆ. ನಿನಗೆ ಯಾವ ರೀತಿಯಲ್ಲಿಯೂ ಅನನುಕೂಲವಾಗುವುದಿಲ್ಲ."

ಈ ಮಾತು ಕೇಳಿ ಮುದುಕನಿಗೆ ಆಶ್ಚರ್ಯವಾಯಿತು. ಅದನ್ನು ಮೀರಿದ ಸಂತೋಷವೂ ಆಯಿತು. ಇಷ್ಟು ವರ್ಷಗಳ ಕಾಲ ಮಾಡುತ್ತಿದ್ದ ಕೆಲಸವನ್ನು ಇನ್ನು ಮುಂದುವರೆಸುವ ಅಗತ್ಯವಿಲ್ಲ! ಜೀವನೋಪಾಯಕ್ಕೆ ಎಲ್ಲ ವ್ಯವಸ್ಥೆಯೂ ಆಗಿಬಿಡುತ್ತದೆ! ಅತ್ಯಂತ ಹರ್ಷದಿಂದ ಮುದುಕ ಮನೆಗೆ ಹಿಂತಿರುಗಿದ. ತನ್ನ ಚಿಕ್ಕ ಗುಡಿಸಲು ಎಲ್ಲೆಲ್ಲೂ ಅವನಿಗೆ ಕಾಣಲೇ ಇಲ್ಲ! ಗುಡಿಸಿಲಿನ ಜಾಗದಲ್ಲಿ ಒಂದು ಸುಂದರವಾದ ಮನೆ ಎದ್ದಿತ್ತು! ಮನೆಯೊಳಗಿನಿಂದ ಮುದುಕಿ ಮೆಲ್ಲನೆ ಹೊರಬಂದಳು. ಬಹಳ ಉತ್ಸಾಹದಿಂದ ಗಂಡನಿಗೆ ಹೇಳಿದಳು, "ಬನ್ನಿ, ಬನ್ನಿ. ಒಳಗೆ ನೋಡುವಿರಂತೆ, ಬನ್ನಿ. ಮನೆ ತುಂಬ ಪದಾರ್ಥಗಳಿವೆ. ಅಕ್ಕಿ, ಬೇಳೆ, ತರಕಾರಿ, ಹಾಲು, ಸಕ್ಕರೆ, ಉಪ್ಪು – ಪ್ರತಿಯೊಂದೂ ಇದೆ. ಯಾವುದಕ್ಕೂ ಅಭಾವವಿಲ್ಲ." ಮುದುಕ ಮನೆಯೊಳಗೆ ಬಂದು ಕುಳಿತನು. ಮುದುಕಿಗೆ ತಾನು ಕಾಡಿನಲ್ಲಿ ಕಂಡ ಚಿನ್ನದ ಹಕ್ಕಿಯ ಕಥೆಯನ್ನು ವಿವರವಾಗಿ ತಿಳಿಸಿಹೇಳಿದನು. ಅವರಿಗೆ ಅರ್ಥವಾಯಿತು, 'ಓಹೋ, ಆ ಹಕ್ಕಿ ಸಾಧಾರಣವಾದುದಲ್ಲ, ಅದು ಭಗವಂತನ ದೂತನೇ ಆಗಿರಬೇಕು' ಎಂದು.

ಈಗ ಮುದುಕ ಮತ್ತು ಮುದುಕಿ ಇಬ್ಬರೂ ಯಾವುದೇ ಚಿಂತೆಯಿಲ್ಲದೆ ಸುಖವಾಗಿ ದಿನ ಕಳೆಯುತ್ತಿದ್ದರು. ಆದರೆ ಜೀವನದಲ್ಲಿ ವೈವಿಧ್ಯತೆಯೇ ಇರಲಿಲ್ಲ. ಇದರಿಂದ ಮುದುಕಿಗೆ ಬೇಸರ. ಈ ಬೇಜಾರನ್ನು ನಿವಾರಿಸಿಕೊಳ್ಳುವುದು ಹೇಗೆ? ಇದ್ದಕ್ಕಿದ್ದಂತೆ ಆಕೆಗೆ ಒಂದು ಆಲೋಚನೆ ಬಂದಿತು. ಒಂದು ದಿನ ದೂರುವ ದನಿಯಲ್ಲಿ ತನ್ನ ಗಂಡನಿಗೆ ಹೀಗೆ ಹೇಳಿದಳು: "ಈ ಏಕತಾನತೆಯ ಜೀವನ ನನಗೇಕೋ ಬಹಳ ಬೇಸರ ತಂದಿದೆ. ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಹುಡುಕಿನೋಡಿ. ನೀವು ಮತ್ತೆ ಆ ಚಿನ್ನದ ಹಕ್ಕಿಯ ಹತ್ತಿರ ಹೋಗಿ, 'ನನಗೆ ಆಕಾಶದಲ್ಲಿ ಹಾರಾಡಲು ಇಚ್ಛೆಯಾಗುತ್ತಿದೆ' ಎಂದು ಹೇಳಿ."

ಮುದುಕ ಹೆಂಡತಿಯ ಆಸೆಯನ್ನು ಈಡೇರಿಸಲು ಮತ್ತೆ ಕಾಡಿಗೆ ಹೊರಟ. ಬಹಳ ಹುಡುಕಾಡಿದ ನಂತರ ಕೊನೆಗೊಮ್ಮೆ ಆ ಪಕ್ಷಿ ಮತ್ತೆ ಕಾಣಿಸಿಕೊಂಡಿತು. ಮುದುಕನು ಮುದುಕಿಯ ಆಸೆಯನ್ನು ಚಿನ್ನದ ಹಕ್ಕಿಗೆ ತಿಳಿಸಿದ. "ಸರಿ, ಹಾಗೇ ಆಗಲಿ" ಎಂದಿತು ಚಿನ್ನದಹಕ್ಕಿ. ತೃಪ್ತಿಯಿಂದ ಮುದುಕ ಮನೆಗೆ ಹಿಂತಿರುಗಿದ. ಆದರೆ ಹೆಂಡತಿ ಎಲ್ಲಿಯೂ ಕಾಣಲಿಲ್ಲ. ಅದಕ್ಕೆ ಬದಲಾಗಿ ಒಂದು ಪಕ್ಷಿ ಮನೆಯಲ್ಲಿ ಎಗರಾಡುತ್ತಿದೆ! ಸುತ್ತಿ, ಸುತ್ತಿ ಹಾರಾಡುತ್ತ ಕುಣಿಯುತ್ತಿದೆ. ಆ ಪಕ್ಷಿ ಮುದುಕನಿಗೆ ಹೇಳಿತು, "ನಾನು ಆಕಾಶದಲ್ಲಿ ಹಾರಾಡಲು ಬಯಸಿದ್ದೇನೇ ಹೊರತು, ಪಕ್ಷಿಯಾಗಬೇಕೆಂದು ಬಯಸಿರಲಿಲ್ಲ. ನಾನು ಮತ್ತೆ ಮನುಷ್ಯಳೇ ಆಗಬೇಕು. ಹೋಗಿ ಬೇಗ. ಚಿನ್ನದ ಹಕ್ಕಿಗೆ ಇದನ್ನು ತಿಳಿಸಿರಿ." ಮುದುಕ ಕಾಡಿಗೆ ಹೋದ. ಬಹಳಷ್ಟು ಹುಡುಕಿದ. ಆದರೆ ಚಿನ್ನದ ಹಕ್ಕಿ ಮತ್ತೆ ಕಾಣಿಸಲೇ ಇಲ್ಲ. ಮುದುಕಿ ಹಕ್ಕಿಯಾಗಿಯೇ ಉಳಿದುಬಿಟ್ಟಳು! **(ಒಕಿನೊಯಾ ಪ್ರಾಂತ್ಯದ ಜನಸಾಮಾನ್ಯರಲ್ಲಿ ಪ್ರಚಲಿತವಾಗಿರುವ ಕಥೆ.)**


**ಬಂಗಾಳಿ ಮೂಲ: ರಾಜಕೃಷ್ಣ ಭಟ್ಟಾಚಾರ್ಯ,**
**ಚಿತ್ರ : ಋುಂಕೋ ಭಟ್ಟಾಚಾರ್ಯ, ಕನ್ನಡಾನುವಾದ : ಗಿರಿಜಾದೇವಿ)**

# ಶಿವಭಕ್ತ ವಿದ್ಯಾಪತಿ


ಕಥೆ : ಆರ್.ವಿ. ಚಿತ್ರ : ಶಂಕರ್

**1** ಅಂದು ಮಹಾಶಿವರಾತ್ರಿ. ರಾತ್ರಿಯ ಸಮಯ. ಶಿವದೇವಸ್ಥಾನ ಭಕ್ತರಿಂದ ತುಂಬಿಹೋಗಿದೆ. ಆಸ್ಥಾನ ವಿದ್ವಾಂಸನಾದ ವಿದ್ಯಾಪತಿಯು ಮಧುರವಾದ ದನಿಯಿಂದ ಭಕ್ತಿಗೀತೆಗಳನ್ನು ಹಾಡುತ್ತಿದ್ದಾನೆ. ಅವುಗಳನ್ನು ರಚಿಸಿರುವವನು ರಾಜಾ ಶಿವಸಿಂಗ್.


ರಾಜಾ ಶಿವಸಿಂಗ್ ಮತ್ತು ರಾಣಿ ಲಕ್ಷ್ಮೀದೇವಿ – ಇಬ್ಬರೂ, ಎಲ್ಲವನ್ನೂ ಮರೆತು ಈ ಗಾನದಲ್ಲೇ ಮೈಮರೆತಿದ್ದಾರೆ.





**2** ಒಂದು ರಾತ್ರಿ ವಿದ್ಯಾಪತಿ ಮಲಗಿ ನಿದ್ರಿಸುತ್ತಿದ್ದನು. ಕನಸಿನಲ್ಲಿ ಅವನ ಮುಂದೆ ಭಗವಾನ್ ಶಿವನು ಬಂದುನಿಂತನು. ಅವನ ತಲೆಯ ಮೇಲೆ ಕೈಯಿರಿಸಿ, ಆಶೀರ್ವದಿಸಿದನು.




**3** ಮರುದಿನ ಮುಂಜಾನೆಯ ಹೊತ್ತಿಗೇ ವಿದ್ಯಾಪತಿಯು ಸ್ನಾನಮಾಡಿ, ಶಿವನನ್ನು ಪೂಜಿಸಲು ಕುಳಿತುಕೊಂಡನು. ಹಠಾತ್ತನೆ, ದಿವ್ಯಶಕ್ತಿಯೊಂದು ಅವನ ಹೃದಯವನ್ನು ಆವರಿಸಿಬಿಟ್ಟಿತು.




**4** ತಾನು ಕಂಡ ದಿವ್ಯದರ್ಶನವನ್ನು ಬಣ್ಣಿಸುವ ಒಂದು ಹಾಡನ್ನು ವಿದ್ಯಾಪತಿಯು ಆ ಕ್ಷಣದಲ್ಲಿಯೇ ರಚಿಸಿದ. ಮರುದಿನ ರಾಜಾಸ್ಥಾನದಲ್ಲಿ ಅದನ್ನು ಹಾಡಿದ. ಈ ಹಾಡನ್ನು ಕೇಳಿ ರಾಜನಿಗೆ ತುಂಬ ಕೋಪ ಬಂತು.



**5** ವಿದ್ಯಾಪತಿಯು ತನ್ನ ಸ್ವಗ್ರಾಮಕ್ಕೆ ಹಿಂತಿರುಗಿದನು. ಅಲ್ಲಿಯೇ ತನ್ನ ಭಕ್ತಿಗೀತೆಗಳ ಹಾಡುಗಾರಿಕೆಯನ್ನು ಮುಂದುವರೆಸಿದನು. ಶ್ರೀಕೃಷ್ಣನ ದಿವ್ಯನಾಮದ ಉಚ್ಚಾರಣೆ ಅಲ್ಲಿನ ದೇಗುಲದಲ್ಲಿ ಅನವರತವೂ ಸಾಗಿತು. ಹರಿಭಕ್ತರು ಇದರಲ್ಲಿ ಪಾಲ್ಗೊಂಡು, ಆನಂದಭರಿತರಾದರು.




**6** ಕಾಲಕ್ರಮೇಣ ರಾಜಾ ಶಿವಸಿಂಗನ ರಾಜ್ಯವನ್ನು ದೆಹಲಿಯ ಸುಲ್ತಾನನು ಗೆದ್ದುಕೊಂಡನು; ರಾಜನನ್ನು ದೆಹಲಿಯ ಸೆರೆಮನೆಯಲ್ಲಿ ಬಂಧಿಯಾಗಿಟ್ಟನು. ರಾಣಿ ಲಕ್ಷ್ಮೀದೇವಿ ವಿದ್ಯಾಪತಿಗೆ ಹೇಳಿಕಳುಹಿಸಿದಳು.





**7** ದೆಹಲಿಗೆ ಹೋಗುವ ದಾರಿಯಲ್ಲಿ ಜಟಾಧಾರಿಯಾದ ಶಿವಭಕ್ತನೊಬ್ಬನು ವಿದ್ಯಾಪತಿಗೆ ಆಹಾರವನ್ನು ನೀಡಿದನು. ಅಂದು ರಾತ್ರಿ ಅವನಿಗೆ ಒಂದು ಕನಸು ಬಿತ್ತು. ಅದರಲ್ಲಿ ಅಂದು ಬೆಳಗ್ಗೆ ಸಿಕ್ಕಿದ್ದ ಆ ಅಪರಿಚಿತನು ಸಾಕ್ಷಾತ್ ಶಿವನೇ ಎಂದು ವಿದ್ಯಾಪತಿಗೆ ಮನವರಿಕೆಯಾಯಿತು.





**8** ಆ ಶಿವಭಕ್ತನ ಸಹಾಯದಿಂದ ವಿದ್ಯಾಪತಿಗೆ ಸುಲ್ತಾನನ ಭೇಟಿಯ ಅವಕಾಶ ದೊರೆಯಿತು. ರಾಧಾಕೃಷ್ಣರ ದಿವ್ಯಪ್ರೇಮದ ಬಗೆಗಿನ ಹಾಡುಗಳನ್ನು ವಿದ್ಯಾಪತಿಯು ಅವನ ಮುಂದೆಯೂ ಹಾಡಿದನು. ಅದನ್ನು ಕೇಳಿ ಸುಲ್ತಾನ ಮತ್ತು ಅವನ ಸಭಿಕರು ಮನಸ್ಸಿನಲ್ಲಿಯೇ ಸ್ವರ್ಗಕ್ಕೆ ಏರಿದಂತೆ ಆಗಿಬಿಟ್ಟರು.




**9** ಸುಲ್ತಾನನು ತನ್ನ ಮಾತನ್ನು ಉಳಿಸಿಕೊಂಡನು. ರಾಜಾ ಶಿವಸಿಂಗನನ್ನು ಸೆರೆಮನೆಯಿಂದ ಬಿಡುಗಡೆ ಮಾಡುವಂತೆ ಆಜ್ಞೆಮಾಡಿದನು. ವಿದ್ಯಾಪತಿಯು ರಾಜನೊಡನೆ ತನ್ನ ರಾಜ್ಯಕ್ಕೆ ಬಂದನು. ಅವನ ಜೊತೆಯಲ್ಲಿಯೇ ಆ ಶಿವಭಕ್ತನೂ ಇದ್ದನು. ಅಲ್ಲಿ ಅವರೆಲ್ಲರಿಗೂ ಭವ್ಯವಾದ ಸ್ವಾಗತ ಕಾದಿತ್ತು.




**10** ರಾಜನನ್ನು ಬಿಡುಗಡೆ ಮಾಡಿಸಿದ್ದಕ್ಕೆ ವಿದ್ಯಾಪತಿಗೆ ಅನೇಕ ಉಡುಗೊರೆಗಳು ಸಿಕ್ಕಿದವು; ವಿಸ್ತಾರವಾದ ಜಮೀನು ಕೂಡ ಸಿಕ್ಕಿತು. ಅವನ ಹೆಂಡತಿಯಾದ ದುರ್ಗೆಗೆ ಇದರಿಂದ ಬಹಳ ಅಹಂಕಾರ ಬಂದಿತು. ವಿದ್ಯಾಪತಿಯ ಜೊತೆಗಿದ್ದ ಶಿವಭಕ್ತನನ್ನು ಕೇವಲ ಒಬ್ಬ ಸೇವಕನೆಂದು ಅವಳು ತಿಳಿದುಕೊಂಡಳು. ತನ್ನ ಗಂಡನೇ ಅವನಿಗೆ ಕೆಲಸ ಕೊಟ್ಟಿದ್ದಾನೆಂದು ಅಂದುಕೊಂಡಳು. ಅವನಿಗೆ ಬೇರೆಬೇರೆ ರೀತಿಯ ಕಷ್ಟದ ಕೆಲಸಗಳನ್ನು ಕೊಡಲಾರಂಭಿಸಿದಳು.




**11** ವಿದ್ಯಾಪತಿಗೆ ಈ ಸಂಗತಿ ಗೊತ್ತಿರಲಿಲ್ಲ. ಒಂದು ದಿನ ಅವನು ಮನೆಗೆ ಹಿಂತಿರುಗುತ್ತಿದ್ದನು. ಆಗ ಶಿವಭಕ್ತನು ಬಟ್ಟೆ ಒಗೆಯುತ್ತಿದ್ದುದನ್ನು ಕಂಡು ಗಾಬರಿಗೊಂಡನು.




**12** ವಿದ್ಯಾಪತಿ ಅದನ್ನು ಕಂಡು, ಅವಳನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಹೇಳಿದ.

